# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ

| | | |
|---|---|---|
| ಸಾಕ್ಷಿದಾರರ ಹೆಸರು | - | **ಜೋತಿಶ್ರೀ ಗಜಾನನ ನಾಯ್ಕ** |
| ತಂದೆ/ಗಂಡನ ಹೆಸರು | - | **ಗಜಾನನ ನಾಯ್ಕ** |
| ವಯಸ್ಸು | - | 35 ವರ್ಷ |
| ಉದ್ಯೋಗ | - | **ಅಬಕಾರಿ ನಿರೀಕ್ಷಕರು, ಕುಮಟಾ ವಲಯ, ಕುಮಟಾ** |
| ವಾಸ್ತವ್ಯ | - | ಕುಮಟಾ |

(ಇಂದು ದಿನಾಂಕಃ 06-03-2026 ರಂದು ಸತ್ಯ-ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ - ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನಾನು ದಿಃ 26-09-2024 ರಿಂದ ಇಲ್ಲೀಯವರೆಗೆ ಕುಮಟಾ ವಲಯದಲ್ಲಿ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 28-01-2025 ರಂದು ನಾನು ಮನೆಯಲ್ಲಿ ಇದ್ದಾಗೆ ಹೆಬೈಲು ಗ್ರಾಮದ ಮಾರುತಿ ವೆಂಕಟ್ರಮಣ ಎನ್ನುವವನು ತನ್ನ ಮನೆಯಲ್ಲಿ ಕಳ್ಳಬಟ್ಟಿಯನ್ನು ತಯಾಲರಿಸುವ ಉದ್ದೇಶದಿಂದ ಬೆಲ್ಲದ ಕೊಳೆಯನ್ನು ದಾಸ್ತಾನು ಇಟ್ಟಿದ್ದಾನೆ ಎಂದು ಮಾಹಿತಿ ಬಂದಿದ್ದು ನಂತರ ಬಂದಿರುವ ಮಾಹಿತಿಯನ್ನು ನನ್ನ ಸಿಬ್ಬಂದಿಗೆ ದೂರವಾಣಿ ಮೂಲಕ ತಿಳಿಸಿ ಅವರಿಗೆ ಠಾಣೆಗೆ ಬರಲು ತಿಳಿಸಿರುತ್ತೇನೆ. ನಾನೂ ಕೂಡಾ ಠಾಣೆಗೆ ಬಂದು ನನ್ನ ಸಿಬ್ಬಂದಿಗಳ ಜೊತೆ ಸರಕಾರಿ ವಾಹನದಲ್ಲಿ ಬಾತ್ಮಿ ಬಂದ ಸ್ಥಳಕ್ಕೆ ಹೊರಟೆವು .

ಆರೋಪಿತನ ಮನೆಗೆ ಹೊಗುವ ಪೂರ್ವದಲ್ಲಿ ಹುಣಸಿಕೊಪ್ಪ ಬ್ರೀಜ್ ನ ಹತ್ತಿರ ನಿಂತಿದ್ದ ಒಬ್ಬ ವ್ಯಕ್ತಿಯನ್ನು ಪರಿಚಯ ಮಾಡಿಕೊಂಡು ಆತನಿಗೆ ನಾವು ಬಂದ ವಿಷಯ ತಿಳಿಸಿ ಆರೋಪಿತನ ಮನೆಗೆ ಶೋಧಿಸ ಬೇಕಾಗಿರುವುದರಿಂದ ಆ ಸಮಯದಲ್ಲಿ ನಮ್ಮ ಜೊತೆ ಪಂಚರಾಗಿ ಬರುವಂತೆ ಕೇಳಿಕೊಂಡಾಗ ಆತ ಒಪ್ಪಿಕೊಂಡಿರುತ್ತಾರೆ. ಇನ್ನೊಂದು ಪಂಚರ ಅವಶ್ಯಕತೆ ಇರುವುದರಿಂದ ಸ್ಥಳದಲ್ಲಿ ಪರಿಶೀಲಿಸಿದಾಗ ಅಲ್ಲಿ ಯಾರೂ ಕಂಡು ಬರದೇ ಇದ್ದಾಗ ನಮ್ಮ ಸಿಬ್ಬಂದಿಯಾದ ಚಾಸಾ 5 ರವನ್ನು ಪಂಚರನ್ನಾಗಿ ಮಾಡಿಕೊಂಡು , ಚಾಸಾ 4 ರವರಿಗೆ ವಿಡಿಯೋ ಚಿತ್ರಿಕರಣ ಮಾಡುವಂತೆ ಕೇಳಿಕೊಂಡಿರುತ್ತೇವೆ.

ನಾವು ಬಾತ್ಮಿ ಬಂದ ಸ್ಥಳಕ್ಕೆ ತೆರಳುತ್ತಿದ್ದಂತೆ ಮನೆಯ ಹತ್ತಿರ ಒಬ್ಬ ವ್ಯಕ್ತಿಯು ನಿಂತುಕೊಂಡಿರುವುದು ಕಂಡು ಬಂದಿರುತ್ತದೆ . ನಂತರ ಆತನನ್ನು ವಿಚಾರಿಸಲಾಗಿ ಆತನ ಹೆಸರು ಮಾರುತಿ ವೆಂಕಟ್ರಮಣ ನಾಯ್ಕ ಹೆಬ್ಬೈಲು ಎಂದು ತಿಳಿಸಿರುತ್ತಾನೆ ಆತನಿಗೆ ನಾವು ಬಂದ ಮಾಹಿತಿಯನ್ನು ತಿಳಿಸಲಾಗಿ ನಿಮ್ಮ ಮನೆಯನ್ನು ಶೋಧಿಸಬೇಕು, ಶೋಧನಾ ಸಮೂಚಿತ ವಾರೆಂಟ್ ಅನ್ನು ತಯಾರಿಸಲು ಸಾಕಷ್ಟು ಸಮಯಾವಕಾಶ ಇಲ್ಲದೆ ಇದ್ದರಿಂದಕೆ ಎ ಎಕ್ಟ 54 ರ ರನ್ವಯ ಶೋಧನಾ ವಾರೆಂಟ್ ಅನ್ನು ಸ್ಥಳದಲ್ಲಿ ತಯಾರಿಸಿಕೊಂಡು ಸದರಿ ದಾಖಲಾತಿಗೆ ಆರೋಪಿತನ ಹಾಗೂ ಪಂಚರ ಸಹಿಯನ್ನು ಪಡೆದುಕೊಂಡು ನಂತರ ಮನೆಯ ಒಳಗೆ ಪ್ರವೇಶಿಸಿ, ಮನೆಯನ್ನು ಶೋಧಿಸಿದಾಗ ಯಾವುದೇ ಬೆಲ್ಲದ ಕೊಳೆಗಳು ಕಂಡುಬಂದಿರುವುದಿಲ್ಲ . ನಂತರ ಮನೆಯಿಂದ ಹೊರಗಡೆ ಬಂದು ಆತನ ಬಚ್ಚಲು ಮನೆಯನ್ನು ಪ್ರಶೇಶಿಸಿ ಶೋಧಸಿದಾಗ ಅಲ್ಲಿಯು ಯಾವುದೇ ರೀತಿಯ ಬೆಲ್ಲದ ಕೊಳೆಗಳು ಇರುವುದು ಕಂಡುಬಂದಿರುವುದಿಲ್ಲ .

ಬಚ್ಚಲ ಮನೆಯಿಂದ ಹೊರಗಡೆ ಬರುತ್ತಿದ್ದಂತೆ ಅದರ ಪಕ್ಕದಲ್ಲಿ ಇರುವ ಹಲಸಿನ ಮರದ ಕೆಳಗಡೆ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಏನೋ ಮುಚ್ಚಿಟ್ಟಿರುವುದು ಕಂಡು ಬಂದಿದ್ದು ಅದನ್ನು ಪಂಚರ ಸಮಕ್ಷಮ ಸರಿಸಿ ನೋಡಲಾಗಿ ಅಲ್ಲಿ 20 ಲೀ ಸಾಮರ್ಥ್ಯದ ಒಂದು ತಗಡಿನ ಡಬ್ಬಿ ಮತ್ತು 20 ಲೀ

ಸಾಮರ್ಥ್ಯದ ಒಂದು ಪ್ಲಾಸ್ಟಿಕ್ ಕೊಡ ಮತ್ತು ಒಂದು ಪ್ಲ್ಯಾಸ್ಟಿಕ್ ಡಬ್ಬಿ ಹಾಗೂ ಕಳ್ಳಬಟ್ಟಿಯನ್ನು ತಯಾರಿಸಲು ಬಳಸಲು ಎರಡು ಅಲ್ಯೂಮಿನಿಯನ್ ಕಂಡೇನ್ಸರ್ ಕಂಡು ಬಂದಿರುತ್ತದೆ.

20 ಲೀಟರ್ ಸಾಮರ್ಥ್ಯದ ಒಂದು ತಗಡಿನ ಡಬ್ಬಿ ಹಾಗೂ ಪ್ಲ್ಯಾಸ್ಟಿಕ್ ಕೊಡದಲ್ಲಿ ದ್ರವ ರೂಪಾದ ಕಂದುಬಣ್ಣದ ದ್ರವ ಪಾದಾರ್ಥ ಇರುವುದು ಕಂಡುಬಂದಿರುತ್ತದೆ. ಸದರಿ ದ್ರವಕ್ಕೆ ನಮ್ಮ ಲಾಟಿಯನ್ನು ಹಾಕಿ ತಿರುಗಿಸಿದಾಗ ಸದರಿ ವಸ್ತುವು ಬೆಲ್ಲದ ಕೊಳೆಯ ಹುಳಿ ವಾಸನೆ ಬರುತ್ತಿತ್ತು. ನಮಗೆ ಸ್ಥಳದ 40 ಲೀಟರ್ ನಷ್ಟು ಬೆಲ್ಲದ ಕೊಳೆ ಸ್ಥಳದಲ್ಲಿ ಸಿಕ್ಕಿದ್ದು . ಆರೋಪಿತನಿಗೆ ಇದು ಅಬಕಾರಿ ಕಾಯಿದೆ ಅಡಿಯಲ್ಲಿ ಅಪರಾದ ಎಂದು ತಿಳಿಯಿಸಿ ಸಿಕ್ಕಂತಹ ಬೆಲ್ಲದ ಕೊಳೆ ಹಾಗೂ ವಸ್ತುಗಳನ್ನು ಜಪ್ತುಪಡಿಸಿಕೊಳ್ಳಲಾಯಿತು.

ಜಪ್ತುಪಡಿಸಿಕೊಂಡ ಬೆಲ್ಲದ ಕೊಳೆಯ ಪೈಕಿ ತಗಡಿನ ಡಬ್ಬಿಯಿಂದ ಹಾಗೂ ಪ್ಲಾಸ್ಟಿಕ್ ಕೊಡದಿಂದ ತಲಾ 1 ಲೀಟರ್ ನಷ್ಟು ಬೆಲ್ಲದ ಕೊಳೆಯನ್ನು ತೆಗೆದು ಅದನ್ನು ಪ್ಲಾಸ್ಟಿಕ್ ಬಾಟಲಿಗೆ ಹಾಕಿ ಮುಚ್ಚಳನ್ನು ಮುಚ್ಚಿ ಅದಕ್ಕೆ ಬಿಳಿಯ ಬಟ್ಟೆಯನ್ನು ಹಾಕಿ ದಾರದಿಂದ ಕಟ್ಟಿ ಇಲಾಖಾ ಸೀಲ್ ಹಾಕಿರುತ್ತೇವೆ ನಂತರ ಮಾದರಿ ಮೋಹರವು ಹಾಗೂ ಮಾದರಿ ಚೀಟಿಯನ್ನು ತಯಾರಿಸಿ ವಿವರಗಳನ್ನು ಅದರ ಮೇಲೆ ನಮೂದಿಸಿ ಪಂಚರ ಸಹಿಯನ್ನು ಪಡೆದು ಮಾದರಿ ತೆಗೆದ ಬಾಟಲಿಗಳ ಮೇಲೆ ಹಾಗೂ ಇತರ ವಸ್ತುಗಳ ಮೇಲೆ ಹಾಕಲಾಯಿತು. ಉಳಿದ ಬೆಲ್ಲದ ಕೊಳೆಯನ್ನು ಮೇಲಾಧಿಕಾರಿಗಳ ಆದೇಶದಂತೆ ಸ್ಥಳದಲ್ಲಿ ನಾಶಪಡಿಸಲಾಯಿತು.

ಈ ಸಮಯದಲ್ಲಿ ಪಂಚಸಾಕ್ಷಿದಾರರು ಹೇಳಿದಂತೆ ನಿಪಿ 2 ರನ್ನು ಬೆಳಿಗ್ಗೆ 9-15 ರಿಂದ 10-15 ಗಂಟೆಗೆಯ ವರೆಗೆ ತಯಾರಿಸಲಾಯಿತು. ಸದರಿ ಸಮಯದಲ್ಲಿ ನಿಪಿ 3 ರಿಂದ 6 ದಾಖಲಾತಿಗಳನ್ನು ಸ್ಥಳದಲ್ಲಿ ತಯಾರಿಸಲಾಯಿತು.

ಆರೋಪಿತನಿಗೆ ಬಿ ಎನ್ ಎಸ್ ಎಸ್ ಕಲಂ 35(3) ರಂತೆ ನೋಟೀಸ್ಸನ್ನು ನೀಡಿ ನಂತರ ಕಛೇರಿಗೆ ಹಾಜರಾಗಿ ಸರಕಾರದ ಪರವಾಗಿ ದೂರನ್ನು ನೀಡಿ, ಪ್ರವವ ಯನ್ನು ತಯಾರಿಸಿರುತ್ತೇನೆ.

ಘಟನಾ ಸ್ಥಳದಲ್ಲಿ ವಿಡಿಯೋ ಚಿತ್ರೀಕರಣವನ್ನು ಮಾಡಿರುವುದನ್ನು ಚಾಸಾ 4 ರವರು ಸಿಡಿಗೆ ತುಂಬಿಸಿ ಮಾನ್ಯ ನ್ಯಾಯಾಲಯಕ್ಕೆ ದಾಖಲೆಗಳನ್ನು ನೀಡಿರುತ್ತಾರೆ. ನಿಪಿ 1 ರಿಂದ 5, 7 ರ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿಪಿ 1 ಬಿ ಯಿಂದ ನಿಪಿ 5 ಬಿ, ನಿಪಿ 7 (ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ, ಸಾಕ್ಷಿಯು ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ. 6** ಎಂದು ಗುರುತಿಸಲಾಗಿರುತ್ತದೆ.

ಸಾಕ್ಷಿಗೆ ಇನ್ನೋಂದು ದಾಖಲಾತಿಯನ್ನು ತೋರಿಸಲಾಗಿ, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಸದ್ರಿ ದಾಖಲಾತಿಯು **ದೂರು** ಆಗಿದ್ದು, ಅದನ್ನು **ನಿ.ಪಿ. 8 ಎಂದು,** ಸಾಕ್ಷಿಯ ಸಹಿಯನ್ನು **ನಿ.ಪಿ.8ಎ ಎಂದು** ಗುರುತಿಸಲಾಯಿತು.

ಸಾಕ್ಷಿಗೆ ಇನ್ನೋಂದು ದಾಖಲಾತಿಯನ್ನು ತೋರಿಸಲಾಗಿ, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಸದ್ರಿ ದಾಖಲಾತಿಯು **ಪ್ರಥಮ ವರ್ತಮಾನ ವರದಿ**ಯಾಗಿದ್ದು, ಅದನ್ನು **ನಿ.ಪಿ. 9 ಎಂದು,** ಸಾಕ್ಷಿಯ ಸಹಿಯನ್ನು **ನಿ.ಪಿ.9ಎ ಎಂದು** ಗುರುತಿಸಲಾಯಿತು.

ನ್ಯಾಯಾಲಯದ ಮುಂದೆ ಇರುವ ಪ್ಲಾಸ್ಟಿಕ್ ಡಬ್ಬಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು **ಮು.ಮಾ 1** ಎಂದು, ಸಾಕ್ಷಿಯ ಸಹಿಯನ್ನು ಎಂ ಒ 1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಒಂದು ಲೀಟರ್ ಸಾಮರ್ಥ್ಯದ ಎರಡು ಬೆಲ್ಲದ ಕೊಳೆ ತುಂಬಿದ ಬಾಟಲಿಗಳನ್ನು ನೋಡಿ ಗುರುತಿಸಿದ್ದು ಅದನ್ನು **ಮು.ಮಾ.2 ಎಂದು** ಸಹಿಯನ್ನು **ಮು.ಮಾ.2(ಎ)** ಎಂದು ಗುರುತಿಸಲಾಯಿತು.

20 ಲೀಟರ್ ಸಾಮರ್ಥ್ಯದ ತಗಡಿನ ಡಬ್ಬಿಯನ್ನು ನೋಡಿ ಗುರುತಿಸಿದ್ದು ಅದನ್ನು **ಮು.ಮಾ. 3** ಎಂದು ಸಹಿಯನ್ನು **ಮು.ಮಾ.3(ಎ)** ಎಂದು ಗುರುತಿಸಲಾಯಿತು. ಹಸಿರು ಬಣ್ಣದ

ಕೊಡವನ್ನು **ಮು.ಮಾ–4 ಎಂದು ಸಾಕ್ಷಿಯ ಸಹಿಯನ್ನು ಮು.ಮಾ 4 ಎ** ಎಂದು ಗುರುತಿಸಲಾಯಿತು.

ಎರಡು ಅಲ್ಯೂಮಿನಿಯಮ್ ಕಂಡೇನ್ಸರ್ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ **ಎಂ ಒ 5 ಎಂದು ಸಾಕ್ಷಿ ಸಹಿಯನ್ನು ಎಂ ಒ 5 ಎ ಎಂದು** ಗುರುತಿಸಲಾಯಿತು.

ಸಾಕ್ಷಿಯು ಒಂದು ಬಿಳಿ ಚೀಲವನ್ನು ನೋಡಿ ಗುರುತಿಸಿದ್ದು ಅದನ್ನು **ಎಂ ಒ 6 ಎಂದು** ಗುರುತಿಸಲಾಯಿತು.

ಈ ಹಂತದಲ್ಲಿ ದಾಳಿಯ ಸಂದರ್ಭದಲ್ಲಿ ತೆಗೆದ ವಿಡಿಯೋ ಚಿತ್ರೀಕರಣವನ್ನು ಪ್ರದರ್ಶಿಸಲು ಚಾ.ಸಾ.1 ರವರ ಕಚೇರಿಯ ಗಣಕಯಂತ್ರವನ್ನು ನ್ಯಾಯಾಲಯಕ್ಕೆ ತಂದಿದ್ದು, ಅದರ ಮೂಲಕ ವಿಡಿಯೋ ಚಿತ್ರೀಕರಣವನ್ನು ಪ್ರದರ್ಶಿಸಲಾಯಿತು. ಆರೋಪಿ ಪರ ವಕೀಲರ ತಕರಾರಿಗೆ ಒಳಪಟ್ಟು ಸದ್ರಿ ಸಿಡಿಯನ್ನು ನ್ಯಾಯಾಲಯದ ಮುಂದೆ ಪ್ರದರ್ಶಿಸಲಾಯಿತು.

ನ್ಯಾಯಾಲಯದ ಮುಂದೆ ಇರುವ ಸೀಲ್ಡ ಕವರನಲ್ಲಿ ಇದ್ದಂತಹ ಸಿಡಿಯನ್ನು ಚಾಸಾ 1 ಕಛೇರಿಯ ಗಣಕಯಂತ್ರಕ್ಕೆ ಹಾಕಿ ಪ್ರದರ್ಶಿಸಲಾಯಿತು.

ಸದ್ರಿ ಸಿಡಿಯು ದಾಳಿಯನ್ನು ಪ್ರಾರಂಭಿಸಿದ ಸಮಯ ಹಾಗೂ ದಿನಾಂಕವು ನಮೂದಾಗದೇ ಇದ್ದು, 29 ನಿಮಿಷ 39 ಸೆಕೆಂಡುಗಳ ವಿಡಿಯೋ ಆಗಿದ್ದು, ಸದ್ರಿ ವಿಡಿಯೋವನ್ನು ಪ್ರದರ್ಶಿಸಲಾಗಿ, ಚಾಸಾ 1 ರವರು ಹಾಜರ ಇದ್ದು, ಸದ್ರಿ ವಿಡಿಯೋದಲ್ಲಿ ಯಾವುದೇ ಮಾತುಕತೆ ಕೇಳಿಬರುವುದಿಲ್ಲ. ಸದರಿ ವಿಡಿಯೋ ಪ್ರಾರಂಭಮಾಡಿದಾಗ ಚಾಸಾ 1, 2,3 ಹಾಗೂ 5 ರವರು ಹಾಜರಿರುತ್ತಾರೆ ಸದರಿ ಸಮಯದಲ್ಲಿ ಚಾಸಾ 2 ರವರಿಂದ ಒಂದು ದಾಖಲಾತಿಗೆ ಸಹಿ ಪಡೆದುಕೊಂಡು ನಂತರ ಆರೋಪಿತನ ಮನೆಯ ಕಡೆಗೆ ಬಂದಿರುತ್ತಾರೆ. ಸದರಿ ಸಮಯದಲ್ಲಿ ಆರೋಪಿತನು ಮನೆಯ ಹೊರಗಡೆ ಇದ್ದು ಸದರಿ ಸಮಯದಲ್ಲಿ ಚಾಸಾ

1 ರವರು ಆರೋಪಿತನ ಬಳಿ ಏನೋ ಮಾತನಾಡಿದಂತೆ ಕಂಡು ಬರುತ್ತದೆ . ಸದರಿ ಮನೆಯ ಹೊರಗಡೆ ಚಾಸಾ 3 ರವರು ಏನೋ ಒಂದು ದಾಖಲಾತಿಯನ್ನು ಬರೆಯುತ್ತಿರುವುದು ಕಂಡು ಬರುತ್ತದೆ. ಸದರಿ ಸಮಯದಲ್ಲಿ ಪಂಚನು ಮನೆಯನ್ನು ಬಿಟ್ಟು ಹೋಗಿರುತ್ತಾನೆ. ನಂತರ ಚಾಸಾ3 ರವರು ಬರೆದಿರುವ ದಾಖಲಾತಿಗೆ ಆರೋಪಿತನಿಂದ ಸಹಿಯನ್ನು ಪಡೆದುಕೊಂಡಿರುವುದು ಕಂಡುಬರುತ್ತದೆ. ಆರೋಪಿತನು ಚಾಸಾ 3 ರವರ ಸೂಚನೆಯ ಮೇರೆಗೆ ಸಹಿ ಮಾಡುತ್ತಿರುವುದು ಕಂಡುಬಂದಿರುತ್ತದೆ. ನಂತರ ಪಂಚನು ಆರೋಪಿತನ ಮನೆಗೆ ಬಂದಿದ್ದು ಆತನೂ ಕೂಡಾ ಒಂದು ದಾಖಲಾತಿಗೆ ಸಹಿ ಮಾಡಿದ್ದು ಕಂಡು ಬರುತ್ತದೆ. ನಂತರ ಆರೋಪಿತನ ಮನೆಯ ಒಳಗೆ ಚಾಸಾ 1,2,3 ಹಾಗೂ 5 ರವರು ಹೋಗುತ್ತಿರುವುದು ಕಂಡು ಬಂದಿದ್ದು ಅಲ್ಲಿ ಏನೋ ಹುಡುಕುತ್ತಿರುವುದು ಕಂಡುಬರುತ್ತದೆ. ಸದರಿ ಮನೆಯ ಒಳಗೆ ಒಂದು ಮಹಿಳೆ ಹಾಗೂ ಹುಡುಗ ಕಂಡುಬಂದಿರುತ್ತದೆ. ನಂತರ ಆರೋಪಿತನ ಮನೆಯ ಅಡಿಗೆ ಕೋಣೆಯ ಒಳಗೆ ಹೋಗಿ ಪರಿಶೀಲಿಸಿದ್ದು ಕಂಡುಬಂದಿರುತ್ತದೆ. ನಂತರ ಬಿಳಿಯಬಣ್ಣದ ಗೋಣಿ ಚೀಲದಲ್ಲಿ ಮನೆಯು ಬಾಗಿಲಿನ ಬಲಗಡೆ ಇರುವ ಬಿಳಿಯ ಚೀಲವನ್ನು ನೋಡಿ ನಂತರ ಆತನ ಮನೆಯ ಎಡಗಡೆ ಹೋದಾಗ ಆತನ ಮನೆಯ ಬೇಡ್ ರೂಮ್ ಗೆ ಹೋಗಿರುವುದು ಕಂಡುಬರುತ್ತದೆ ಅಲ್ಲಿ ಹುಡುಕಾಡಿ ಒಂದು ಖುರ್ಚಿಯನ್ನು ತೆಗೆದುಕೊಂಡಿದ್ದು ಅ ಸಮಯದಲ್ಲಿ ವಿಡಿಯೋ ಚಿತ್ರಿಕರಣದಲ್ಲಿ ಶಬ್ದವು ಕೇಳಿಬಂದಿರುತ್ತದೆ. ನಂತರ ಆರೋಪಿತನ ಮನೆಯಿಂದ ಹೊರಗಡೆ ಬಂದು ಆತನ ಮನೆಯ ಎಡಬದಿಗೆ ಹೋಗಿದ್ದು ಸ್ವಲ್ಪ ದೂರದ ವರೆಗೆ ನಡೆದುಕೊಂಡು ಹೋಗಿರುವುದು ಕಂಡು ಬಂದಿರುತ್ತದೆ. ಆತನ ಮನೆಯ ಸ್ವಲ್ಪ ದೂರದಲ್ಲಿ ಆರೋಪಿತನ ಬಚ್ಚಲು ಮನೆ ಇದ್ದು ಅಲ್ಲಿ ಪರಿಶೀಲಿಸಿದಾಗ ಏನೂ ಕಂಡು ಬಂದಿರುವುದಿಲ್ಲ.

ನಂತರ ಸದರಿ ವಿಡಿಯೋ ಚಿತ್ರೀಕರಣವು ಬಂದ್ ಆಗಿರುತ್ತದೆ. ಯಾವುದೇ ವಿಡಿಯೋ ಚಿತ್ರೀಕರಣ ಪ್ರದರ್ಶನಗೊಳ್ಳದೇ ಇದ್ದು ನಡೆದ ಸಪ್ಪಳ ಕೇಳಿ ಬರುತ್ತದೆ .

ನಂತರ ವಿಡಿಯೋ ಚಿತ್ರೀಕರಣವು ಪುನಃ 13-22 ಕ್ಕೆ ಪುನಃ ಚಿತ್ರೀಕರಣಗೊಂಡಿದ್ದು ಸದರಿ ಸಮಯದಲ್ಲಿ ಚಾಸಾ 1 ರವರು ಹಲಸಿನ ಮರದ ಕೆಳಗಡೆ ಯಾವುದೇ ಒಂದು ಡಬ್ಬಿಗೆ ಕೋಲನ್ನು ಹಾಕಿ ಅದನ್ನು ತಿರುಗಿಸುತ್ತಿದ್ದು ಆ ಸಮಯದಲ್ಲಿ ಪಂಚ ಹಾಜರಿರುವುದು ಕಂಡು ಬಂದಿರುತ್ತದೆ. ಅವರು ಆರೋಪಿತರನ್ನು ವಿಚಾರಿಸಿದಾಗ ಅವನು ತನ್ನ ಜಾಗದಲ್ಲಿ ಸದರಿ ವಸ್ತುವು ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾನೆ. ಈ ಕುರಿತಾಗಿ ಆರೋಪಿತನನ್ನು ವಿಚಾರಿಸಿದಾಗ ಆತನು ಬಾಯಿಮುಚ್ಚಿ ನಿಂತಿರುವುದು ಕಂಡುಬಂದಿರುತ್ತದೆ. ಆತನಿಗೆ ಪ್ರಕರಣದ ಕುರಿತಾಗಿ ತಿಳಿಸಲಾಗಿರುತ್ತದೆ. ನಂತರ ಸ್ಥಳದಲ್ಲಿ ಒಂದು ತಗಡಿನ ಡಬ್ಬದಲ್ಲಿ ಸಿಕ್ಕಿಂದಂತಹ ಬೆಲ್ಲದ ಕೊಳೆಯನ್ನು ಹಾಗೂ ಹಸಿರು ಬಣ್ಣದ ಕೊಡದಲ್ಲಿ ಸಿಕ್ಕಿದ ಬೆಲ್ಲದ ಕೊಳೆಯನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದಿರುವುದು ಕಂಡುಬಂದಿರುತ್ತದೆ. ನಂತರ ಬಿಳಿಯ ಬಟ್ಟೆಯಿಂದ ಅವುಗಳನ್ನು ಸುತ್ತಿ ಅರಗಿನಿಂದ ಸೀಲ್ ಮಾಡಿದ್ದು ಲೇಬಲ್ ಅಂಟಿಸಿದ್ದು ಕಂಡುಬರುತ್ತದೆ. ಸ್ಥಳದ ಪಂಚರು ಹಾಗೂ ಚಾಸಾ 1 ರವರು ಸಹಿ ಹಾಕಿರುವುದು ಕಂಡುಬಂದಿರುತ್ತದೆ. ಪುನಃ ವಿಡಿಯೋ ಚಿತ್ರೀಕರಣವು ಬಂದ್ ಆಗಿರುತ್ತದೆ.

ದಾಳಿಯ ಸಮಯದಲ್ಲಿ ಮಾಡಿರುವ ವಿಡಿಯೋ ಚಿತ್ರೀಕರಣವನ್ನು ನೋಡಿ ಗುರುತಿಸಿದ್ದು ಅದನ್ನು **ಮೂದ್ದೆ ಮಾಲು** 7 ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ